## ಆತ್ಮವಿಲ್ಲದ ಸಂಗತಿಗಳ ಕುರಿತು...

ಆತ್ಮವಿಲ್ಲದ ಸಂಗತಿಗಳ ಬಗ್ಗೆ
ಎಂದಿಗೂ ನನ್ನೊಂದಿಗೆ
ಮಾತನಾಡಬೇಡಿ
ಅದನ್ನವರು ನನಗಾಗಿ
ಅಥವಾ ನಿಮಗಾಗಿ
ಖಂಡಿತ ಸೃಷ್ಟಿ ಮಾಡಿಲ್ಲ

ಯಾರು ವಿಶೇಷ ಪರವಾನಗಿ
ಪಡೆದು ಬಂದಿದ್ದಾರೋ
ಬಿಟ್ಟು ಬಿಡಿ ಅಂಥವರ ಪಾಲಿಗೆ
ಒಂದು ಜನ್ಮ ಸಾಲದು
ಕಾಲಹರಣದ ಐಷಾರಾಮಿತನಕೆ
ಅವಕಾಶ ಇರುವವರಿಗೆ

ನೀವು ಗಮನಿಸಿದಂತೆ ನಾವು
ಹತಾಶರಾಗಿಯೇ ಹುಟ್ಟಿ ಬಂದಿದ್ದೇವೆ
ಪೀಡಿತ ಆತ್ಮಗಳೊಂದಿಗೆ
ಧ್ವಂಸಗೊಂಡ ದೇಹಗಳೊಂದಿಗೆ

ನಮಗಾಗಿ
ಏನೂ ಉಳಿದಿಲ್ಲವಿಲ್ಲಿ
ಬೆತ್ತಲಾಗಲು ಆದರೆ
ಸಾಯುವ ಭಯವಿದೆ
ಬದುಕುವ ಛಲವಿದೆ
ಪರಸ್ಪರ ಬೆಂಕಿ ಹಚ್ಚುವ ಕೆಲಸವಿದೆ
ಮತ್ತೆ ಎಲ್ಲವನೂ ಸುಡುಬೇಕಿದೆ

ಬೆಂಕಿ
ಸುಡುವ ಬೆಂಕಿ
ಸುಡು ಸುಡು ಬೆಂಕಿ...



ಕಲೆ: ಗುರು ರಾಷ್ಟ್ರೇಂದ್ರ

## ನನ್ನನ್ನೇ ಏಕೆ ಪ್ರೀತಿಸಿದೆ?

ಆ ದಿನ ಬಂದೇ ಬರುವುದು
ಆ ಒಂದು ದಿನ
ನೀನು ಬಾಯಿ ಬಿಟ್ಟು ಕೇಳುವೆ
'ನನ್ನನ್ನೇ ಏಕೆ ನೀನು ಪ್ರೀತಿಸಿದೆ?'

ಉತ್ತರ ಕೊಡುವೆ ನಾನಾಗ
ಬಿಳಿಗೋಡೆಗೆ ಎದುರಾಗಿ ನಿಂತ
ನಾನು ಬಲ್ಲ
ನಿನ್ನ ಆ ಏಕೈಕ ಪರಿಚಿತ
ಬೆತ್ತಲ ಭಂಗಿಯ ಪ್ರತಿಮೆಯೊಂದಿಗೆ:

ಯಾಕೆ?
ಯಾವಾಗ?
ಯಾವುದು ಸರಿ?
ಯಾವುದು ತಪ್ಪು?
ಎಂಬ ಗೊಡವೆಯಿಲ್ಲದೇ

ಉತ್ತರ ನೀಡುವೆ:
ನಾನು ನಿನ್ನನ್ನು ಪ್ರೀತಿಸುವೆ
ಮತ್ತೆ ಮತ್ತೆ ಮನಸಾರೆ ಮೆಚ್ಚುವೆ
ನಿನ್ನದೇ ಕನಸುಗಳ
ಹೊರತುಪಡಿಸಿ
ಮತ್ತೇನೂ ಬೇಡದೆ!